**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಇವರ ನಿಯಮ-72ರಡಿಯ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

**ವಿಷಯ:-**

ಸರ್ಕಾರಿ, ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ, ಬಿ.ಇ.ಡಿ. ವಿಶ್ವವಿದ್ಯಾನಿಯಲದ ಬೋಧಕರುಗಳ, ದೈಹಿಕ ಶಿಕ್ಷಣ ಶಿಕ್ಷಕರು, ಹಾಗೂ ಗ್ರಂಥಪಾಲಕ ಸಿಬ್ಬಂದಿಗೆ ಇದುವರೆವಿಗೂ ಎ.ಐ.ಸಿ.ಟಿ.ಇ 7ನೇ ವೇತನ ಶ್ರೇಣಿಯನ್ನು ಅಳವಡಿಸಿಕೊಳ್ಳದೆ ಇರುವುದರಿಂದ ಹಾಗೂ 6ನೇ ವೇತನ ಆಯೋಗದ ವೇತನ ಶ್ರೇಣಿಯ ಬಾಕಿಯನ್ನು ನೀಡದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಬಗ್ಗೆ .

**ಉತ್ತರ:-**

7ನೇ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ರಾಜ್ಯದ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಗಳಲ್ಲಿನ ಅರ್ಹ ಬೋಧಕ ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಗಳಿಗೆ ವಿಸ್ತರಿಸುವ ಸಂಬಂಧದಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿದ್ದು, ಕರಡು ಸರ್ಕಾರಿ ಆದೇಶವನ್ನು ಸಿದ್ಧಪಡಿಸಿ ಆರ್ಥಿಕ ಇಲಾಖೆಯ ಪರಿಶೋಧನೆಗೆ ಸಲ್ಲಿಸಲಾಗಿದೆ, ಆರ್ಥಿಕ ಇಲಾಖೆಯಿಂದ ಕರಡು ಆದೇಶ ಪರಿಶೋಧನೆಗೊಂಡು ಬಂದ ತಕ್ಷಣ ಆದೇಶ ಹೊರಡಿಸಲಾಗುವುದು.

ಸರ್ಕಾರಿ ಮತ್ತು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ದಿ:1-1-2006 ರಿಂದ ದಿ:31-3-2010 ರವರೆಗಿನ ಅವಧಿಗೆ ಪರಿಷ್ಕೃತ 6ನೇ ಎಐಸಿಟಿಇ ವೇತನದ ಬಾಕಿ ಬಿಡುಗಡೆ ಮಾಡಲು ಕ್ರಮವಾಗಿ ರೂ.90.85ಲಕ್ಷಗಳು ಮತ್ತು ರೂ.7776.41ಲಕ್ಷಗಳು ಸೇರಿ ಒಟ್ಟು ರೂ.7867.26ಲಕ್ಷಗಳ ಅಗತ್ಯವಿದ್ದು, ಇದರಲ್ಲಿ 2 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ 8 ಬೋಧಕ ಸಿಬ್ಬಂದಿಗಳಿಗೆ ಬಿಡುಗಡೆ ಮಾಡಲಾಗಿದೆ.

ಇನ್ನುಳಿದ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ 786 ಬೋಧಕ ಸಿಬ್ಬಂದಿ ವರ್ಗದವರಿಗೆ ಇದುವರೆವಿಗೂ 8 ಕಂತುಗಳಲ್ಲಿ ಒಟ್ಟು ರೂ.4683.84 ಲಕ್ಷಗಳನ್ನು ಸರ್ಕಾರವು ಒದಗಿಸಿದ್ದು, ಸದರಿ ಮೊತ್ತದಲ್ಲಿ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ರೂ.4680.55ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

..2

ಈ ಸಂಬಂಧದ ಸರ್ಕಾರಿ ಆದೇಶ, ದಿನಾಂಕ, ಮೊತ್ತ ಹಾಗೂ ಇಲಾಖೆಯಿಂದ ಬಿಡುಗಡೆ ಮಾಡಿದ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

| ಕ್ರ ಸಂ | ಸರ್ಕಾರದ ಆದೇಶ ಸಂಖ್ಯೆ | ಸರ್ಕಾರದಿಂದ ಒದಗಿಸಲಾದ ಮೊತ್ತ (ರೂ. ಲಕ್ಷಗಳಲ್ಲಿ) | ಇಲಾಖೆಯಿಂದ ಬಿಡುಗಡೆ ಮಾಡಿದ ದಿನಾಂಕ |
|---|---|---|---|
| | ಇಡಿ 311 ಯುಎನ್ಇ 2012, ದಿನಾಂಕ:26-5-2014 | 983.84 | ದಿ:22-7-14 |
| | ಇಡಿ 480 ಯುಎನ್ಇ 2014 ದಿನಾಂಕ: 5-11-2014 | 500.00 | ದಿ:18-3-15 |
| | ಇಡಿ 480 ಯುಎನ್ಇ 2014 ದಿನಾಂಕ: 19-6-2015 | 200.00 | ದಿ:4-7-15 |
| | ಇಡಿ 480 ಯುಎನ್ಇ 2014, ದಿನಾಂಕ: 28-10-2015 | 100.00 | ದಿ:10-3-2016 |
| | ಇಡಿ 311 ಯುಎನ್ಇ 2012 (ಭಾಗ-3), ದಿ:19-12-15 | 100.00 | ದಿ:10-3-2016 |
| | ಇಡಿ 480 ಯುಎನ್ಇ 2014, ದಿನಾಂಕ:9-8-2016 | 1400.00 | ದಿ:20-9-16 |
| | ಇಡಿ 480 ಯುಎನ್ಇ 2014, ದಿನಾಂಕ:5-10-2016 | 1300.00 | ದಿ:18-10-16 |
| | ಇಡಿ 480 ಯುಎನ್ಇ 2014, ದಿನಾಂಕ:3-3-2017 | 100.00 | ದಿ:8-3-17 |
| | ಒಟ್ಟು | 4683.84 | |

ಉಳಿದ ಪರಿಷ್ಕೃತ ಎಐಸಿಟಿಇ ವೇತನದ ಬಾಕಿ ಮೊತ್ತ ರೂ.3095.86 ಲಕ್ಷಗಳನ್ನು ಒದಗಿಸುವ ಸಂಬಂಧ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿರುತ್ತದೆ.

ಇಡಿ 53 ಟಿಇಸಿ 2020

(ಡಾ॥ ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು,
(ಉನ್ನತ ಶಿಕ್ಷಣ, ಐಟಿ&ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ).